ಶ್ರೀ ಬಸವರಾಜ್ ಪಾಟೀಲ್ ಆನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಗಮನಕ್ಕೆ ಬಂದಿಲ್ಲ.

ಈ) ಉದ್ಭವಿಸುವುದಿಲ್ಲ.

ಆಯುರ್ವೇದ ವೈದ್ಯರ ನೇಮಕಾತಿ ಬಗ್ಗೆ

೪೧೭. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆದ ಆಯುರ್ವೇದ ವೈದ್ಯರ ಆಯ್ಕೆಯಲ್ಲಿ ಬಂಗಳೂರು ಮೈಸೂರು ಗುಲ್ಬರ್ಗ. ಕರ್ನಾಟಕ ವಿಶ್ವವಿದ್ಯಾನಿಲಯಗಳಿಂದ ಆಯ್ಕೆಗೊಂಡ ವೈದ್ಯರ ಸಂಖ್ಯೆ ಎಷ್ಟು ?

ಆ) ಇಲ್ಲಿ ಆಯ್ಕೆಯಾದ ವೈದ್ಯರುಗಳಲ್ಲಿ ಮೀಸಲಾತಿಯಲ್ಲಿ ಆಯ್ಕೆಯಾದವರೆಷ್ಟು ಹಾಗೂ ಜನರಲ್ ಮೆರಿಟ್‌ನಲ್ಲಿ ಆಯ್ಕೆಯಾದವರೆಷ್ಟು ?

ಇ) ಗುಲ್ಬರ್ಗಾ ವಿಶ್ವವಿದ್ಯಾನಿಲಯದಿಂದ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳ ವಿವರ ಒದಗಿಸುವುದು ವಿದ್ಯಾರ್ಥಿಗಳಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ಈ ಅಸಮತೋಲನವನ್ನು ಸರಿಪಡಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೯೮೬ರಲ್ಲಿ ಲೋಕ ಸೇವಾ ಆಯೋಗದಿಂದ ನಡೆದ ಆಯುರ್ವೇದ ವೈದ್ಯರ ೭ಳ ಮುಖ್ಯ ಪಟ್ಟಿ ಹಾಗೂ ೩೭ ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆಯಾದ ವಿವಿಧ ವಿಶ್ವವಿದ್ಯಾನಿಲಯಗಳಿಂದ ಆಯ್ಕೆಗೊಂಡಿರುವ ವೈದ್ಯರ ವಿವರ ಈ ರೀತಿ ಇದೆ.

ವಿಶ್ವವಿದ್ಯಾನಿಲಯ	ಮುಖ್ಯ ಪಟ್ಟಿ	ಹೆಚ್ಚುವರಿ ಪಟ್ಟಿ
೧. ಬೆಂಗಳೂರು	೨೬	೧೦
೨. ಮೈಸೂರು	೧೭	೮
೩. ಗುಲ್ಬರ್ಗಾ	೩	೩
೪. ಕರ್ನಾಟಕ	೨೭	೧೫
೫. ನಾಗಪುರ	೧	—
೬. ಉಸ್ಮಾನಿಯಾ	—	೧

ಆ) ವಿಾಸಲಾತಿಯಲ್ಲಿ ಆಯ್ಕೆಯಾದವರ ಹಾಗೂ ಜನರಲ್ ಮೆರಿಟ್‌ನಲ್ಲಿ ಆಯ್ಕೆಯಾದವರ ವಿವರ ಈ ರೀತಿ ಇದೆ.

		ಮಂಖ್ಯೆ ಪಟ್ಟಿ	ಹೆಚ್ಚುವರಿ ಪಟ್ಟಿ
೧.	ಜನರಲ್ ಮೆರಿಟ್	೨೨	೧೫
೨.	ಬಿಎಸ್‌ಜಿ	೧೬	೮
೩.	ಬಿಸಿಎಂ	೧೯	೧೦
೪.	ಬಿಸಿಟಿ	೧೦	೪
೫.	ಬಿ.ಟಿ.	೫	—
೬.	ಎಸ್.ಟಿ.	೧	—
೭.	ಮಾಜಿ ಸೈನಿಕ	೧	—

ಇ) ಈ ಹುದ್ದೆಗಳನ್ನು ಕರ್ನಾಟಕ ರಾಜ್ಯಸರ್ಕಾರಿ ಸೇವಾ (ನೇರ ನೇಮಕಾತಿ ಆಯ್ಕೆ) ನಿಯಮಾವಳಿ ೧೯೭೩ರ ನಿಯಮ ೭ರಂತೆ ಆಯ್ಕೆ ಮಾಡಲಾಗಿದೆ. ಗುಲ್ಬರ್ಗಾ ವಿಶ್ವವಿದ್ಯಾನಿಲಯದಿಂದ ತೇರ್ಗಡೆ ಹೊಂದಿದ ೨೪ ಅಭ್ಯರ್ಥಿಗಳು ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದರು. ಗುಲ್ಬರ್ಗ ವಿಶ್ವವಿದ್ಯಾಲಯದ ೨೪ ಅಭ್ಯರ್ಥಿಗಳು ತಮ್ಮ ಅರ್ಹತಾ ಪರೀಕ್ಷೆಯಲ್ಲಿ ಪಡೆದಿರುವ ಸರಾಸರಿ ಶೇಕಡ ಅಂಕಗಳು ೫೧.೪೫ ರಿಂದ ೫೯.೩೧ರವರೆಗೆ ಇರುವುದು ಕಂಡುಬಂದಿದೆ. ಅವರಲ್ಲಿ ೩ ಅಭ್ಯರ್ಥಿಗಳನ್ನು ಆಯೋಗವು ಮುಖ್ಯ ಪಟ್ಟಿಯಲ್ಲಿ ಹಾಗೂ ೩ ಅಭ್ಯರ್ಥಿಗಳನ್ನು ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆ ಮಾಡಿರುತ್ತದೆ,

ಈ ಹುದ್ದೆಗಳನ್ನು ಕರ್ನಾಟಕ ಸರ್ಕಾರಿ ಸೇವಾ ನೇರ ನೇಮಕಾತಿ ನಿಯಮಾವಳಿ ೧೯೭೩ರ ನಿಯಮ ೭ರಂತೆ ಆಯ್ಕೆ ಮಾಡಲಾಗಿದೆ. ಇದರ ಪ್ರಕಾರ ಅಭ್ಯರ್ಥಿಯು ಅರ್ಹತಾ ಪರೀಕ್ಷೆಯಲ್ಲಿ ಪಡೆದ ಎಲ್ಲಾ ವರ್ಷಗಳ ಸರಾಸರಿ ಅಂಕಗಳನ್ನು ಹಾಗೂ ಸಂದರ್ಶನದ ವೇಳೆಯಲ್ಲಿ ಕೊಟ್ಟ ಅಂಕಗಳನ್ನು ಸೇರಿಸಿ ಯಾವ ಅಭ್ಯರ್ಥಿಯು ಹೆಚ್ಚಾಗಿ ಅಂಕಗಳನ್ನು ಗಳಿಸಿರುವರೋ ಅಂತಹ ಅಭ್ಯರ್ಥಿಗೆ ವಿಾಸಲಾತಿ ಹುದ್ದೆ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ,

ಸಂದರ್ಶನದ ವೇಳೆಯಲ್ಲಿ ಆಯೋಗಕ್ಕೆ ವಿದ್ಯಾರ್ಥಿಗಳ ವಿವರಗಳನ್ನು ಆಕಾರಾದಿಯಾಗಿ ತಯಾರಿಸಿ ಹಾಗೂ ಅಭ್ಯರ್ಥಿಗಳನ್ನು ಆಕಾರಾಧಿಯಾಗಿ ಸಂದರ್ಶನಕ್ಕೆ ಕರೆಯಲಾಗುತ್ತದೆ. ಸಂದರ್ಶನದ ಸಮಯದಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ವಿವರಗಳು ಆಯೋಗವೇ ಹಿಂದೆ ತೆಗೆದುಕೊಂಡಿದ್ದ ತೀರ್ಮಾನದಂತೆ ಆಯೋಗ ಮಂಜೂದೆ ಇಡುವ ಹಾಗಿಲ್ಲ. ಅಭ್ಯರ್ಥಿಗಳಿಗೆ ಸಂದರ್ಶನದ ಸಮಯದಲ್ಲಿ ಅವರ ಯೋಗ್ಯತಾನುಸಾರ ಅಂಕಗಳನ್ನು ಆಯೋಗವು ಕೊಟ್ಟು ಆಯ್ಕೆ ಮಾಡಿರುತ್ತದೆ,

ಈ) ಪರಿಶೀಲಿಸಲಾಗುವುದು.

ಜಿಲ್ಲಾಮಟ್ಟದ ಹಾಗೂ ರಾಜ್ಯ ಮಟ್ಟದ ಪೋಲೀಸ್ ಅಧಿಕಾರಿಗಳಿಗೆ ರಹಸ್ಯ ಹಣ ಮಂಜೂರಾತಿ ಬಗ್ಗೆ

೪೨೩. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಎಸ್.ಪಿ. ಹಾಗೂ ಮೇಲ್ಮಟ್ಟದ ಪೋಲೀಸ್ ಅಧಿಕಾರಿಗಳಿಗೆ ರಹಸ್ಯ ಹಣವನ್ನು ಮಂಜೂರು ಮಾಡುವ ಪದ್ಧತಿ ಇವೆಯೇ ?

ಆ) ಹಾಗಿದ್ದಲ್ಲಿ ಈ ಹಣವನ್ನು ಯಾವ ಯಾವ ಕೆಲಸಗಳಿಗಾಗಿ ಖರ್ಚು ಮಾಡಲಾಗುವುದು?

ಇ) ಯಾವ್ಯಾವ ಅಧಿಕಾರಿಗಳಿಗೆ ಒಂದು ವರ್ಷಕ್ಕೆ ಎಷ್ಟು ಹಣ ಮಂಜೂರು ಮಾಡಲಾಗುವುದು

ಈ) ಈ ರೀತಿ ಮಂಜೂರಾದ ಹಣವು ಲೆಕ್ಕ ಪರಿಶೋಧನೆಗೆ ಒಳಗಾಗುವುದೆ ಹಾಗಿಲ್ಲದಿದ್ದಲ್ಲಿ ಕಾರಣಗಳೇನು ?